(15)

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರಡಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರ ಹೇಳಿಕೆ.

-- 0 --

ವಿಷಯ

ಬೆಂಗಳೂರು ಪೂರ್ವ ತಾಲ್ಲೂಕು ಥಣಿಸಂದ್ರ ಮುಖ್ಯ ರಸ್ತೆ, ಸರ್ವೆ ನಂ: 135/1 ರಲ್ಲಿ ಮೆಟ್ರೋ-2ನೇ ಹಂತದ ಕಾಮಾಗಾರಿಯಲ್ಲಿ ಸೇರಿರುವ ಈ ಸ್ವತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ್ದು, ಇದು ಸರ್ಕಾರಿ ಸ್ವತ್ತಾಗಿದ್ದು, ಇದಕ್ಕೆ ಸಂಬಂಧಿಸಿದ ಪರಿಹಾರದ ಮೊತ್ತವನ್ನು ಕಾನೂನು ಬಾಹಿರವಾಗಿ ಖಾಸಗಿ ವ್ಯಕ್ತಿಗಳಿಗೆ ನೀಡುತ್ತಿರುವುದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ

ಬೆಂಗಳೂರು ಮೆಟ್ರೋ ರೈಲು ಯೋಜನೆಗಾಗಿ ನಾಗವಾರ ಗ್ರಾಮದ ಸರ್ವೆ ನಂ.135/1 ರಲ್ಲಿ 100.66 ಚ.ಮೀ., ಮತ್ತು ಸ.ನಂ.135/2 ರಲ್ಲಿ 655.19 ಚ.ಮೀ., ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಲು ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ 28(4)ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ: 17.01.2019ರಂದು ಹೊರಡಿಸಲಾಗಿದೆ.

ಖಾತೆದಾರರ ಕಾಲಂನಲ್ಲಿ (1) ಶ್ರೀ ಆರ್. ಚಂದ್ರಶೇಖರ್ ಬಿನ್ ಕೃಷ್ಣಯ್ಯ, ಮತ್ತು (2) ಶ್ರೀಮತಿ ಸರಸ್ವತಿ ಕೋಂ ಕೆ. ಚಂದ್ರಶೇಖರ್ ಇವರುಗಳ ಹೆಸರನ್ನು ನಮೂದಿಸಲಾಗಿದ್ದು, ಅನುಭವದಾರರ ಕಾಲಂನಲ್ಲಿ ಇಂಡಿಯನ್ ಪೆಟ್ರೋಲ್ ಬಂಕ್ ಹೆಸರನ್ನು ನಮೂದಿಸಲಾಗಿದೆ.

ಈ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಬಿ.ಎಂ.ಆರ್.ಸಿ.ಎಲ್.ರವರುದಿನಾಂಕ: 04.01.2020ರಂದು 655.19 ಚ.ಮೀ. ವಿಸ್ತೀರ್ಣಕ್ಕೆ ರೂ.10,71,05,091/- ಹಾಗೂ 100.56 ಚ.ಮೀ. ವಿಸ್ತೀರ್ಣಕ್ಕೆ ರೂ.1,47,14,417/-ಗಳ ಪರಿಷ್ಕೃತ ಪ್ಯಾಕೇಜ್ ಸಲ್ಲಿಸಿದ್ದು, ಪರಿಹಾರ ಪಾವತಿಸುವ ಕುರಿತು ದಿನಾಂಕ: 06.01.2020ರಂದು ಕಲಂ 29(2)ರನ್ವಯ ಖಾತೆದಾರರಿಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿದೆ.

ಅದರಂತೆ ನಾಗವಾರ ಗ್ರಾಮದ ಸರ್ವೆ ನಂ.135/1 ರ 100.66 ಚ.ಮೀ. ವಿಸ್ತೀರ್ಣಕ್ಕೆ ರೂ.1,47,14,417/-ಗಳನ್ನು ಖಾತೆದಾರರಾದ ಶ್ರೀ ಆರ್.ಚಂದ್ರಶೇಖರ್ ಬಿನ್ ಕೃಷ್ಣಯ್ಯ ಇವರಿಗೆ ಪಾವತಿಸಲಾಗಿದೆ.

ನಾಗವಾರ ಗ್ರಾಮ ಸರ್ವೆ ನಂ: 135/2 ರ 655.19 ಚ.ಮೀ. ವಿಸ್ತೀರ್ಣವನ್ನು ಶ್ರೀ ಬಾಲಾಜಿರಾವ್, ಇಂಡಿಯನ್ ಪೆಟ್ರೋಲ್ ಬಂಕ್ ಇವರು 25 ವರ್ಷಗಳ ಗುತ್ತಿಗೆ ಅವಧಿಗೆ ಪಡೆದಿದ್ದು, ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳಲು ಇನ್ನೂ 9 ವರ್ಷ ಬಾಕಿ ಇರುತ್ತದೆ. ಸದರಿಯವರು ನಮಗೂ ಪರಿಹಾರ ನೀಡಬೇಕೆಂದು ಕೋರಿ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 16258-259/2019ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 14.01.2020ರಂದು ನೀಡಿದ ತೀರ್ಪಿನಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯವರು ಕಾನೂನಿನಂತೆ ಪರಿಶೀಲಿಸಿ, ಭೂಪರಿಹಾರ ಮಾಡಲು ಕ್ರಮವಹಿಸುವಂತೆ ಆದೇಶಿಸಿದೆ.

ಸದರಿ ಸ್ವತ್ತಿನ ಭೂಪರಿಹಾರದ ಕುರಿತು ತಕರಾರು ಇರುವ ಕಾರಣ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ ಕ್ರಮವಹಿಸಿ, ಸಾಮಾನ್ಯ ಐತೀರ್ಪು ರಚಿಸಿ, ಭೂಪರಿಹಾರದ ಮೊತ್ತವನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಠೇವಣಿ ಮಾಡಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಸಿಐ 42 ಐಎಪಿ(ಇ) 2020

(ಜಗದೀಶ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆ ಸಚಿವರು